


# ಗಿನ್ನೆಸ್ ಗುಡ್ಡ

ನ್ಯೂಜಿಲೆಂಡ್ ನ ದಕ್ಷಿಣಭಾಗದಲ್ಲಿನ ಹಾಕೆಸ್ ಕೊಲ್ಲಿಯ ಸಮೀಪದ ಪೊರಂಗಾಹು ಊರಿನ ಬಳಿ ಬೆಟ್ಟವೊಂದಿದೆ.ಕೇವಲ 305 ಮೀಟರ್ ಎತ್ತರವಿರುವ ಈ ಬೆಟ್ಟವನ್ನು ನೋಡಿದರೆ ಅಂತಹ ಹೇಳಿಕೊಳ್ಳುವಂತಹ ವಿಶೇಷತೆ ಏನೂ ಕಾಣುವುದಿಲ್ಲ.ಆದರೆ ಇದು ಪ್ರಸಿದ್ಧಿಗೊಂಡಿರುವುದು ಅದಕ್ಕಿರುವ ಉದ್ದನೆಯ ಹೆಸರಿನಿಂದ!.

ಮೂಲತಃ ಮೌರಿ ಭಾಷೆಯಲ್ಲಿರುವ ಈ ಹೆಸರನ್ನು ಸರಿ ಸುಮಾರಾಗಿ ಭಾಷಾಂತರ ಮಾಡಿದರೆ ಟಮೇಟಿಯಾ ಶೃಂಗದಲ್ಲಿ ಗುಡ್ಡದಲ್ಲಿ ಪ್ರಯಾಣಿಸುವವ ಉದ್ದನೆಯ ಕಾಲುಗಳುಳ್ಳ ಮನುಷ್ಯನು ಗುಡ್ಡದಿಂದ ಜಾರುವವನು, ಗುಡ್ಡವನ್ನು ಹತ್ತುವನು ಹಾಗೂ ಗುಡ್ಡವನ್ನು ನುಂಗುವವನು. ತನ್ನ ಪ್ರೀತಿಪಾತ್ರರಿಗಾಗಿ ಮೂಗಿನಿಂದ ಕೊಳಲನ್ನು ನುಡಿಸುವವನು ಎಂಬ ಅರ್ಥ ಬರುತ್ತದೆ. ಉದ್ದವಾಗಿದ್ದು 85 ಇಂಗ್ಲಿಷ್ ಅಕ್ಷರಗಳನ್ನು ಹೊಂದಿರುವ ಗುಡ್ಡದ ಈ ಹೆಸರು ಇಡೀ ವಿಶ್ವದಲ್ಲೇ ಅತೀ ಉದ್ದನೆಯ ಸ್ಥಳದ ಹೆಸರು ಎಂದು ಗಿನ್ನಿಸ್ ಪುಸ್ತಕದಲ್ಲಿ ದಾಖಲೆಯನ್ನು ಪಡೆದುಕೊಂಡಿದೆ. ಆದರೆ ಬೇರೆ ಆವೃತ್ತಿಗಳ ವರದಿಯ ಪ್ರಕಾರ ಈ ಗುಡ್ಡದ ಹೆಸರು ಇನ್ನೂ ಉದ್ದವಿದೆ ಅಂದರೆ 105 ಇಂಗ್ಲಿಷ್ ಅಕ್ಷರಗಳನ್ನು ಹೊಂದಿದೆ. ಉದ್ದವಾಗಿರುವ ಈ ಹೆಸರನ್ನು ಟೌಮೆಟಾ ಎಂದು ಸಂಕ್ಷಿಪ್ತವಾಗಿ ಕರೆಯಲಾಗುತ್ತದೆ.

ದಂತ ಕಥೆಯ ಪ್ರಕಾರ ಟೌಮಾಟ ಎಂಬಾತನು ಪೊರಂಗಾಹುವಿನ ಹಿಂಭಾಗದಲ್ಲಿ ಪಯಣಿಸುತ್ತಿರುವಾಗ ಅಲ್ಲಿರುವ ಬುಡಕಟ್ಟಿನ ಜನರೊಂದಿಗೆ ಸೆಣಸಾಡಿದನಂತೆ.ಈ ಕಾದಾಟದಲ್ಲಿ ಟೌಮಾಟನ ಸಹೋದರನು ಕೊಲ್ಲಲ್ಪಟ್ಟನು. ಸಹೋದರನ ಅಗಲುವಿಕೆಯಿಂದ ದುಃಖಿತಪ್ತನಾದ ಟೌಮಾಟನು ಕದನ ನಡೆದ ಜಾಗದಲ್ಲಿ ಕೆಲವು ಕಾಲ ತಂಗಿದನಂತೆ. ಪ್ರತೀ ದಿನ ಗುಡ್ಡದ ಮೇಲೆ ಕುಳಿತು ಸಹೋದರನ ಕುರಿತಾದ ಚರಮ ಗೀತೆಯನ್ನು ಕೋವೌವುನಿಂದ ನುಡಿಸುತ್ತಿದ್ದನಂತೆ (ಕೋವೌವು ಎನ್ನುವುದು ಮೂಗಿನಿಂದ ನುಡಿಸುವ ಕೊಳಲಿನಂತಹ ವಾದ್ಯ). ಒಟ್ಟಾರೆಯಾಗಿದೇಶ ವಿದೇಶದ ಪ್ರವಾಸಿಗರು, ಉದ್ದನೆಯ ಹೆಸರಿರುವ ಬೋರ್ಡ್ ಮುಂದೆ ಫೋಟೊ ಕ್ಲಿಕ್ಕಿಸಿಕೊಳ್ಳುವ ಸಲುವಾಗಿಯೇ ಬೆಟ್ಟವನ್ನೇರುವುದಂತೂ ಸುಳ್ಳಲ್ಲ.

■ ವಿನಯಕುಮಾರ್ ಬಿ.ಹೆಚ್.